ಮಾತನಾಡುವುದಿರಲಿ, ನಡೆಯುವ ಶಕ್ತಿಯೇ ಸೋರಿ ಹೋದಂತಿದ್ದ ಮನೀಷನಲ್ಲಿ ಆವರಿಸಿಕೊಂಡ ದುಗುಡ ಮತ್ತು ಭಯದಿಂದ ಸ್ವಲ್ಪವಾದರೂ ಈಚೆಗೆ ತರುವುದು ಮುಖ್ಯ ಅಂತ ಸಂತೋಷ ಅಂದಾಜಿಸಿದ್ದ. ಅಲ್ಲದೇ, ಅವನಿಗೂ ಆ ಸನ್ನಿವೇಶದಿಂದ ತನ್ನೊಳಗೆ ಉಂಟಾದ ವಿಹಲ್ವತೆಯನ್ನು ನಿವಾರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಮನೀಷನನ್ನು ಉದ್ದೇಶಿಸಿ ಮಾತನಾಡುತ್ತಿದ್ದರೂ, ತನ್ನೊಳಗೆ ತಾನು ಮಾತನಾಡಿಕೊಳ್ಳುತ್ತಿರುವ ಮೂಡಿನಲ್ಲಿದ್ದ ಸಂತೋಷನ ಮಾತಿನಿಂದ ಯಾವುದೋ ಭರವಸೆ ಸಿಕ್ಕವನಂತೆ ಮನೀಷನೂ ಸ್ವಲ್ಪ ಚೇತರಿಸಿಕೊಂಡು ಅವನನ್ನು ಅನುಸರಿಸಿಕೊಂಡು ಇಳಿಜಾರಿನ ಗಿಡ, ಬಳ್ಳಿಗಳ ಆಸರೆಯಲ್ಲಿ ಜಾರುತ್ತ, ಬೀಳುತ್ತ ಇಳಿದ.

ಅಲ್ಲಲ್ಲಿ ಹರಿದ ರೈನ್ ಕೋಟ್ ಕೆಸರಾಗಿ, ಒಳಗಿನ ಬಟ್ಟೆಗಳೆಲ್ಲ ತೋಯ್ದು ತೊಪ್ಪೆಯಾದ, ಪ್ಯಾಂಟ್ ಎತ್ತಿದ್ದ ಮೊಣಕಾಲಿನ ತನಕ ಉಂಬಳ ಕಚ್ಚಿ ಒಸರುತ್ತಿದ್ದ ರಕ್ತದ ಒರತೆ, ಕೈ, ಮುಖಕ್ಕೆ ಅಂಟಿಕೊಂಡಿದ್ದ ಕೆಸರಿನ, ಗಿಡಗಳ ಪಾಚಿಗಳ ಜೊತೆಗೆ ಮುಳ್ಳುಬಳ್ಳಿಗಳ ಗೀರಿನಿಂದ ರಕ್ತಮಯವಾದದ ಅವರನ್ನು ಪೇಟೆಯವರು ಯಾರಾದರೂ ನೋಡಿದ್ದರೆ ಏನಂದುಕೊಳ್ಳುತ್ತಿದ್ದರೋ? ಅಷ್ಟು ಲಾಚಾರಾಗಿತ್ತು ಅವರ ಶರೀರದ ಹೊರಸ್ಥಿತಿ. ಬ್ಯಾಕ್‌ಪ್ಯಾಕ್‌ನಿಂದ ನೀರು ಸೋರುತ್ತಿತ್ತು ಎಂದರೆ ಬೈನಾಕ್ಯೂಲರ್ ಸೇರಿದಂತೆ ಅದರೊಳಗಿದ್ದ ಕ್ಯಾಮೆರಾ, ವಿಡಿಯೊ ಕ್ಯಾಮೆರಾ, ಮೊಬೈಲ್, ಕಾಂಪಾಸ್ ಮುಂತಾದ ಎಲ್ಲ ಸಾಮಗ್ರಿಗಳೂ ನೆಂದುಹೋಗಿವೆ ಎಂತಲೇ ಅರ್ಥ. ಅಂತೂ ಒದ್ದಾಡಿ, ಅರ್ಧ ಜಾರುತ್ತ, ಇನ್ನರ್ಧ ಬಳ್ಳಿಗಳನ್ನು ಬಳಸಿ ಕೆಳಗಿಳಿದು ಬಂದ ಅವರಿಬ್ಬರಿಗೂ ಆಚೆಯ ಬಯಲು ಪ್ರದೇಶಕ್ಕೆ ಹೋಗಲು ಅಡ್ಡಿಯಾಗಿದ್ದು ಒಂದು ಹಳ್ಳ. ನಾಲ್ಕಾರು ಮಾರಗಲದ ಹಳ್ಳವಾದರೂ ಅದು ರಭಸದಿಂದ ತುಂಬಿ ಹರಿಯುತ್ತಿತ್ತು.

ಹೇಗೆ ದಾಟುವುದು ಎನ್ನುವ ಯೋಚನೆಯಲ್ಲೇ ಅವರಿಬ್ಬರೂ ಹಳ್ಳದ ಅಂಚಿನಲ್ಲಿಯೇ ಕೆಳಭಾಗದತ್ತ ಸರಿದರು. ನಸುಗತ್ತಲು ಮತ್ತಷ್ಟು ಮಸುಕಾಗುತ್ತಿತ್ತು. ತಿರುಗಿ ನೋಡಿದರೆ ಇಳಿದುಬಂದ ಗುಡ್ಡ ಹೊಗರಿನಿಂದ ಆಚ್ಛಾದಿತವಾಗಿತ್ತು. ಅಲ್ಲಿಗಿಂತ ಇಲ್ಲೇ ಒಂದಿಷ್ಟು ಬೆಳಕಿದೆ ಎಂದು ಸಂತೋಷ ಅಂದುಕೊಂಡ. ಹಾಗೇ ಹಳ್ಳದಂಚಿನಲ್ಲಿ ನಡೆದು ಬರುತ್ತಿದ್ದವರ ಎದುರು ಆ ನಸುಗತ್ತಲೆಯಲ್ಲಿ ಯಾವುದೋ ಪ್ರಾಣಿ ಎದುರು ಬಂದಂತಾಯ್ತು. ಬೆಚ್ಚಿದ ಅವರ ಎದುರಿನಲ್ಲಿ ಎರಡು ಕಾಲಿನ, ಎರಡು ಕೈಗಳ ಮನುಷ್ಯನೆಂದು ನಂಬಲಾಗದ ದೇಹಾಕೃತಿಯೊಂದು ಪ್ರತ್ಯಕ್ಷಗೊಂಡಿತು.

ಕಾಡಿನ ದಡಸಲು ಗರಿಯ ಗೊರಬು ಹಾಕಿಕೊಂಡಿದ್ದ ಆ ಸಣಕಲು ಶರೀರ ಸೊಂಟದಲ್ಲಿ ತುಂಡು ಬಟ್ಟೆ ಮಾತ್ರ ತೊಟ್ಟಿತ್ತು. ಕೈಯಲ್ಲಿ ಅದೇ ಗರಿಗಳ ಚೀಲ, ಕತ್ತಿ, ಎರಡು ಕಾಲುಗಳಿದ್ದರಿಂದ ಆ ಆಕೃತಿಯನ್ನು ಮನುಷ್ಯ ಎಂದು ಗುರುತಿಸಬಹುದಾಗಿತ್ತು. ಪರಸ್ಪರ ಎದುರುಬದುರಾದವರು ಏಕಾಏಕಿ ದಿಙ್ಮೂಢರಾಗಿಬಿಟ್ಟರು! ಆ ಅಸ್ಪಷ್ಟ ಆಕೃತಿಯನ್ನು ಕಂಡು ಇವರು ಬೆಚ್ಚಿದರೆ, ಎರಡು ದೇಹರೂಪಿಗಳು ಈ ಕಾಡಿನಲ್ಲಿ, ಈ ಹೊತ್ತಿನಲ್ಲಿ, ಈ ರೂಪದಲ್ಲಿ ಕಂಡದ್ದಕ್ಕೆ ಇದೆಲ್ಲೋ ದೆವ್ವವೋ, ಭೂತವೋ ಈ ರೂಪ ಧರಿಸಿ ಬಂದಿವೆ ಎಂದು ಆ ಸ್ವರೂಪಿ ನಿರ್ಧರಿಸಿ, ಹಿಮ್ಮೊಗವಾಗಿ ಓಡಲು ಉದ್ಯುಕ್ತವಾಯ್ತು. ಅವನೊಬ್ಬ ನರಜಂತು ಎನ್ನುವುದನ್ನು ಗ್ರಹಿಸಿದ ಸಂತೋಷ ಇಂಥ ಸಂಕಷ್ಟದ ಸ್ಥಿತಿಯಲ್ಲಿ ಸಿಕ್ಕಿದ ಆತ ತಪ್ಪಿಸಿಕೊಂಡರೆ? ಎನ್ನುವ ಆತಂಕದಿಂದ, 'ಏ, ನಿಲ್ಲೋ ಮಾರಾಯಾ, ಹೆದರಿಕೋಬೇಡ' ಅಂತ ಸರ್ವಶಕ್ತಿಯನ್ನೂ ಉಪಯೋಗಿಸಿ ಕೂಗಿದ. ಅಷ್ಟರಲ್ಲೇ ನಾಲ್ಕಾರು ಮಾರು ಓಡಿದ್ದ ಆತನಿಗೆ ಮನುಷ್ಯ ಸ್ವರ ಕೇಳಿತಾದರೂ ದೆವ್ವಗಳೂ ಮನುಷ್ಯರಂತೆ ಮಾತಾಡುತ್ತವೆ ಎಂದು ಹಿರಿಯರು ಯಾವಾಗಲೋ ಹೇಳಿದ್ದ ಮಾತು ಈಗ ನೆನಪಾಗಿ ನಿಲ್ಲಲು ಹಿಂಜರಿದ. ಮತ್ತೆ ಸಂತೋಷ, 'ನಾವು ದಿಕ್ಕು ತಪ್ಪಿ ಬಂದಿದ್ದೇವೋ, ಸಹಾಯ ಮಾಡೋ' ಎಂದು ಗೋಗರೆಯುವ ಧ್ವನಿಯಲ್ಲಿ ಕೂಗಿದಾಗ ಅವನಿಗೆ ಸ್ವಲ್ಪ ನಂಬಿಕೆ ಬಂದಂತಾಗಿ ನಿಂತ. ತಿರುಗಿ ನೋಡಲು ಭಯ ಪಡುತ್ತಿದ್ದವನ